ಈ ನಾಯಕರುಡಗರಿಗೆ ಹಿಡಿದೆಕೊಡುವಂತ ಕಿರಾತಕದವನೆಂದು, ಚಿಂತೆಯಲ್ಲಿ ಮುಳುಗಿದ್ದ ಅಜ್ಜಿ ಮತ್ತು ತಾತನಿಗೆ ಅದೇ ವಾರದಲ್ಲಿ ಬೆಂಗಳೂರಿನಿಂದ ಊರಿಗೆ ಬಂದಿದ್ದ ದೊಡ್ಡ ಶ್ಯಾನಭೋಗರಕೂಟೆ, ಸ್ವಾಮಿ ನಮ್ಮುಡುಗ ಅಂತ ದುಬಾರಿ ಮಾತಾಡೊವನೆ ಅಲ್ಲ ಸ್ವಾಮಿ. ಈ ಸವಾಸ್ ದೋಷದಲ್ಲಿ ಅವನ್ಯಾರೊ ವಡ್ಡರ ಸೀನನ ಮಗ ಹೇಳ್ ಕೊಟ್ಟ ಅಂತ ಆ ನಾಯಕರುಡುಗಿ ಮ್ಯಾಲೆ ಏನೊ ಕೆಟ್ಟ ಮಾತಾಡಿನಂತೆ. ಇಂಗಾಗಿ ನಮ್ಮುಡುಗುಂದೇನ್ ತಪ್ಪಿಲ್ಲದಿದ್ರು ಅದೆಂಗ್ ಬರ್ತ್ತಾನೊ ಊರಾಕ್ ಬರಲಿ ಇನ್ನೆಷ್ಟು ವರ್ಷ ಕಳದ್ರು ಆ ನನ್ ಮಗನ್ನ ನಾವು ಸುಮ್ಮನು ಬಿಡಲ್ಲ. ನಮಗೈತೆ ಅವನಿಗೈತೆ ಅಂತ ನಮ್ಮುಡುಗನ ಮ್ಯಾಲೆ ಈ ನಾಯಕರ ಮನೆಯವರು ಜಿದ್ದಾಜಿದ್ದಿಗೆ ಕುಂತವರೆಂದು ಹೇಳಿದ ತಾತನ ಮಾತಿಗೆ, ಅಜ್ಜಿ ಮುಖಕ್ಕೆ ಸೆರಗಾಕಿಕೊಂಡಳಂತೆ.

ಏನ್ ಸ್ವಾಮಿ ಏನಾರ ಪ್ರಾಣಾಪಾಯ ಮಾಡಿರೆ ಗತಿಯಂಗೆಂದು ಅಪ್ಪನ ಅಮ್ಮ ಅಜ್ಜಿ ಗಳಗಳನೆ ಅತ್ತಳಂತೆ. ನಮಗೊಳ್ಳೆ ತಲೆನೋವಾಗಿ ಕುಂತೈತ್ ಸ್ವಾಮಿ ನಮ್ಮುಡುಗ ಓದೋದೇನೊ ಗನವಾಗೋದವನೆ. ನಮ್ಮೂರಲ್ಲಿ ಇವನ ಜೊತೆಯ ಎಂಟುಡುಗುರು ಪೇಲಾಗೆವರೆ. ಇವನುಬ್ಬೊನೆ ಹತ್ತನೆ ಕ್ಲಾಸಿನಲ್ಲಿ ಪಾಸಾಗಿರೋದು ಸ್ವಾಮಿ, ಎಂಬ ಅಪ್ಪ ಎಸ್‌ಎಸ್ ಎಲ್ ಸಿ ಯಲ್ಲಿ ಅದೆಂಗ್ ಬರದನೊ ಏನ್ ಬರದ್ ನೋ ಅವನ ಅದ್ಭುತದ ಸಾಧನೆಯನ್ನ ಕುರಿತು ಮಾತನಾಡುವಾಗ ತಾತ ಅವನ ಕರುಳು ಉರುಳಾಡುವಂತ ಚಿಂತೆಯನ್ನೆಲ್ಲ ಹೇಳಿಕೊಂಡ ಮ್ಯಾಲೆ. ವಿಷಯವನ್ನೆಲ್ಲ ಬಿದಿರು ಚೇರಿನ ಮ್ಯಾಲೆ ಕುಂತು ತನ್ನ ಭುಜ ಎದೆಯಲ್ಲಿ ರಾರಾಜಿಸುತ್ತಿದ್ದ ಜನಿವಾರವಾರವನ್ನು ಎಳೆದಾಡುತ್ತ ಆಲಿಸಿದ ಶ್ಯಾನುಭೋಗರು, 'ನಿಮ್ಮುಡುಗನ್ನ ಇಂತ ಇಕ್ಕಟ್ಟನಲ್ಲಿ ನೀವೇನಿಟ್ಟುಕೊಳ್ಳುವುದು ಬೇಡ ಬಿಡು ರಂಗಯ್ಯ. ಸುಮ್ಮನೆ ಪತ್ತೆಯಿಲ್ಲದಂಗೆ ನನ್ ಜೊತೆ ನಮ್ಮನಿಗೆ ಕಳಸ್ ಕೊಡು ರಂಗಯ್ಯ. ಅಲ್ಲೆ ಬೆಂಗಳೂರಲ್ಲಿ ಯಾವುದಾದ್ರು ಕೆಲಸ ಕೊಡಸ್ ಬುಡುತ್ತೀವಿ' ಎಂದು ಪುಣಾತುಮರು ಅಪ್ಪನನ್ನು ಬೆಂಗಳೂರಿಗೆ ಕರೆದುಕೊಂಡೋದರೆಂಬ. ದೂರದೂರಿಗೆ ಓದಲು ಹೋಗಲಾರೆನೆಂದು ಹಠ ಹಿಡಿದಿದ್ದ ಅಪ್ಪನನ್ನು ದೂರದ ಬೆಂಗಳೂರಿಗೆ ಸೇರಿಸಿದ ಕಥೆಯನ್ನ ತಾತ ಬದುಕಿದ್ದಾಗ ಸುತ್ತಲು ಕುಂತ ಮೊಮ್ಮಕ್ಕಳೆದುರು ಹೇಳುವಾಗ ಅವನೆದೆಯ ಆತುಮದಿಂದ ಬರುತ್ತಿದ್ದ ನಿರಾಳವಾದ ಉಸಿರು ನಮ್ಮ ಮುಖಕ್ಕೆ ತಾಕಿ ನಾವು ಬೆಚ್ಚಗಾಗುತ್ತಿದ್ದೆವು. ಚಿಕ್ಕಮ್ಮನೂರಿಗೆ ರಾತ್ರೋರಾತ್ರಿಯೆ ಹೋಗಿ ಅಪ್ಪನನ್ನು ಎಂಟು ಮೈಲಿಯ ಕಲ್ಲು ಮೋರಿಯೆಂಬ ಸರ್ಕಲ್ಲಿಗೆ ನಡಿಸಿಕೊಂಡು ಬಂದು, ಮಬ್ಬುಮಬ್ಬಿಗೆ ಅಲ್ಲಿಗೆ ಬರುವ ಒಂದೇ ಒಂದು, ವೆಂಕಟೇಶ್ವರ ಎಂಬ ಬಸ್ಸತ್ತಿಸಿ ಶ್ಯಾನುಭೋಗರಿಗೆ ಜತೆ ಮಾಡಿಸಿ ಬಂದ ತಾತ, ಆವತ್ತಿನಿಂದ ಮನೇಲಿ ನಿರಾಳ್ ವಾಗಿ ತಟ್ಟೆಯೊಳಗಿನ ಹಿಟ್ಟು ಮುರಿಯಂಗಾದ್‌ನಂತೆ. ಅಲ್ಲಿ ಒಂದಾರು ತಿಂಗಳ ತನಕ ಮನೆಯಲ್ಲೆ ಇಟ್ಟುಕೊಂಡಿದ್ದ ಶ್ಯಾನುಭೋಗರು ಯಾವುದೋ ಟೆಲಿಫೋನ್ ಆಫೀಸಿನಲ್ಲಿ ಟೆಂಪರವರಿಯಾದ ಒಂದು ಕೆಲಸವು ಕೊಡಿಸಿದರಂತೆ. ಆವತ್ತಿನಿಂದ ಅಪ್ಪ ಊರಿನ ಕಡೆ ಅತಿಯಾಗಿ ಬರದಂಗೆ ಬೆಂಗಳೂಲ್ಲೇ ತಳಗಿಟ್ಟಿಸಿಕೊಂಡನೆಂದು, ತಾತ ಅಪ್ಪನ ಕಥೆ ಹೇಳಿಕೊಂಡು ಮೀಸೆ ಮರೆಯಲ್ಲಿ ತೃಪ್ತಿಯಾಗಿ ನಕ್ಕಿದ್ದು ಕೂಡ ನನಗೀಗಲು ಬಹಳ ಚೆನ್ನಾಗಿ ನೆನಪೈತೆ. ನಂತರ ಅಮ್ಮನನ್ನು ಮದುವೆಯಾಗಿ ಬೆಂಗಳೂರಿನ ರಾಜಾನ್ಕುಂಟೆಯಲ್ಲಿ ಒಂದು ಬಾಡಿಗೆ ಮನೆ ಹಿಡುಕೊಂಡ ಮೇಲೆ ಅಂತ ಚಿಕ್ಕಮನೆಯಲ್ಲಿ ನಾನು ಮತ್ತು ನಮ್ಮಣ್ಣಯ್ಯ ಲೋಕದ ಬೆಳಕಿಗೆ ಕಣ್ಣುಬಿಟ್ಟೆವಂತೆ. ಅಂಗೆ ನಾವು ಬೆಳೆದು ಇಸ್ಕೂಲಿಗೆ ಸೇರಿದ ಮ್ಯಾಲೆ ನಮ್ಮಿಬ್ಬರನ್ನು ಓದಿಸಿಕೊಂಡು ಇಲ್ಲೆ ಈ ಬೆಂಗಳೂರಿನಲ್ಲಿ ಕುಂತು ನಿಂತು ಜೀವನ ಕಟ್ಟಿಕೊಂಡವನು ಕಾಲಾನಂತರ ಒಂದೊಳ್ಳೆಯ ಮನೆಯನ್ನು ಕೂಡ ಕಟ್ಟಿಸಿಬಿಟ್ಟ. ಅಪ್ಪನ ನಿರಾಳವೆಂಬೋದು ತಣ್ಣಗಿರುವ ವೇಳೆಯಲ್ಲಿ ಕೆಲಸಕ್ಕೆ ರಿಟೈರ್ಡ ಆಯಿತು. ಈಗೀಗ ರಿಟೈರ್ಡ ಆದಮೇಲೆ ಯಾಕೋ ಏನೋ ಅವನ ಹುಟ್ಟಿದೂರೆಂದ್ರೆ ಎಲ್ಲಿ ಇಲ್ಲದ ಮೋಹದ ಬಟ್ಟಲು ನಿಗಿ ನಿಗಿಯೆಂಬಂತಾಗಿ ಅವನು ಹುಟ್ಟಿಬೆಳೆದ ನಡುವಿನ ಎಡವಟ್ಟುಗಳೆಲ್ಲ ಕಾಲಗರ್ಭದಲ್ಲಿ ಕಣ್ಣು ಮುಚ್ಚಿಕೊಂಡಿರುವುದಕ್ಕೋ ಏನೊ? ಬೆಂಗಳೂರಲ್ಲಿ ದಿನಾ ಬೆಳಗಾದರೆ ಹೊತ್ತು ನೂಕಲಾಗದಿದ್ದಕ್ಕೊ ಏನೊ? ಇಲ್ಲಿ ಅಪ್ಪನನ್ನು ಹೊಗಳುವ ಗೊತ್ತು ಗುರಿಯ ಹೆಸರಿಗೆ ಕಿಮ್ಮತ್ತಿಲ್ಲದಿದ್ದಕ್ಕೊ ಏನೊ? ಏನೆಂಬ ಕಾರಣ ಸ್ಪಷ್ಟವಾಗಿ ಗೊತ್ತಾಗಲಿಲ್ಲ, ಇಂಗೆ ಸದಾ ಊರಿನ ಕಡೆ ಈಗೀಗ ದೌಡಾಯಿಸುತ್ತಿರುವ ಅಪ್ಪ, ಹಬ್ಬ ಹರಿದಿನಗಳು ಕೆಲಸ ಕಾರ್ಯಗಳೆಂದರೆ